# ಅನವರತ ಕಾಯುವುದು ತಾಯ ಕಣ್ಣು...

ತ್ಯಾಗ ಎಲ್ಲಾ ಪೆಪ್ಪರ್‌ಮೆಂಟುಗಳನ್ನು ಎಣಿಸಿ ಜೇಬಿಗೆ ತುಂಬಿಕೊಳ್ಳುವ ಹೊತ್ತಿಗೆ ಮನೆಗೆ ಬಂದ ದೊಡ್ಡಪ್ಪನ ಮಗ ಲೋಕ ಜಗಲಿಯ ಮೇಲಿದ್ದ ಎಲ್ಲಾ ತಿಂಡಿಗಳನ್ನು ನೋಡಿ ಗೊಳೋ ಅಂತ ಅಳಲಿಕ್ಕೆ ಶುರುಮಾಡಿದ. ತ್ಯಾಗನ ಆಸೆಗೆ ಕೂಡಲೇ ಪೆಟ್ಟು ಬಿತ್ತು. ಜಗಲಿಯ ಮೇಲಿದ್ದ ತಿಂಡಿಗಳಲ್ಲಿ ಕೈಗೆ ಸಿಕ್ಕಿದಷ್ಟನ್ನು ಬಾಚಿ, ಜೇಬಿಗೆ ತುರುಕಿಕೊಂಡು ಓಡಲು ಯತ್ನಿಸಿದ. ಕೂಡಲೇ ಒಳಗಿದ್ದ ಇವನವ್ವ ದ್ಯಾವಕ್ಕ ಅಂಗಳಕ್ಕೆ ಓಡಿ ಬಂದು 'ಏನು ಏನಾಯಿತು' ಎನ್ನುತ್ತಿದ್ದಂತೆ ಅಲ್ಲಿ ಎದ್ದ ಗೌಜು ಗದ್ದಲಕ್ಕೆ ಹೊರಗಿನ ಸೃಷ್ಟಿ ಎಲ್ಲ ದನಿಯಾಯಿತು. ಆದರೆ ಆ ದನಿ ಎಲ್ಲ ಅತ್ತಿಂದ ಇತ್ತಿಂದ ಕೇಳುವ ಪ್ರಶ್ನೆಗೆ ಉತ್ತರ ಇಲ್ಲದೆ ತ್ಯಾಗನು ಜಗಲಿಯ ವತ್ತಟ್ಟೆ ಒಂದು ಮೂಲೆಗೆ ಕುಗ್ಗಿ ಕೂನು, ಅವನ ಎದೆ ಧಸಕ್ ಎಂದಿತು.

ಇವನಣ್ಣ ಲೋಕ ಅಳುತ್ತಲೇ 'ದನ, ಕುರಿ ಮೇಯಿಸಲು ಹೋದಾಗ ಕಡ್ಡಿ ಸಿಗಿದು ಕೂಡಿಟ್ಟ ಕಾಸ್ನೆಲ್ಲ ಕದ್ದು, ಅಷ್ಟೊಂದು ತಿಂಡಿ ತಂದು ತಿಂತಾವ್ನೆ ನೋಡವ್ವ' ಎಂದು ತೋರುತ್ತಾ ಗೋಳಾಡತೊಡಗಿದ.

ಹದಿನಾರು–ಹದಿನೇಳು ವರ್ಷದ ತನ್ನ ವಾರಗಿತ್ತಿಯ ಮಗನ ಅಳು ಎಲ್ಲರ ಗಮನ ಸೆಳೆದಾಗ ಯಾಕೋ ಇದು ದ್ಯಾವಕ್ಕನಿಗೆ ಅಪಮಾನವೆನಿಸಿ ಸಿಟ್ಟು ನೆತ್ತಿಗೇರಿ ಸೂರಿಗೆ ಸಿಗಿಸಿದ್ದ ನಾಯಿಗೊಡೆವ ಕೋಲು ಎತ್ತಿಕೊಂಡು ಪೈಡ್ ಪೈಡ್ ಅಂತ ತ್ಯಾಗನಿಗೆ ಹೊಡೆದು ಕೇಳಿದಳು: 'ಕದೀತಿಯ, ಕಂಡೋರಟ್ಟಿಲಿ ಕದೀತಿಯ?' ಎಂದು ಮತ್ತೆ ಮತ್ತೆ ಬಾರಿಸಿದಳು. ಅವಳ ಒಂದೊಂದು ಪೆಟ್ಟಿಗೂ 'ಅಯ್ಯಯ್ಯಪ್ಪೋ ಸತ್ತೇ, ಅಯ್ಯಯ್ಯೋ ಸತ್ತೆ' ಎಂದು ತ್ಯಾಗನು ಬೀದಿಯಲ್ಲಿ ಬಿದ್ದು ಒದ್ದಾಡಿದ. ಅವನ ಜೇಬಿನಲ್ಲಿದ್ದ ಚೂರು ಪಾರು ತಿಂಡಿಗಳು ಒಂದೊಂದೂ ಒಂದೊಂದು ದಿಕ್ಕಾಗಿ ಬಿದ್ದು ಚೆಲ್ಲಾಡಿದವು. ಏಟು ಬಿದ್ದ ಜಾಗವನ್ನು ಹುಡುಕಿ ತಡಕಿ ಉಜ್ಜಿಕೊಳ್ಳುತ್ತಾ ನೆಲದಲ್ಲಿ ಬಿದ್ದೆದ್ದು ಲಬಲಬೋ ಬಾಯ್‌ಬಾಯ್ ಬಡಿದುಕೊಳ್ಳುತ್ತಾ ಹೊರಳಾಡುತ್ತಿದ್ದರೆ ಅಲ್ಲಿ ದೂಳು ಮೇಲೆದ್ದು ಮೋಡ ಕವಿದಂತೆ ಆಯಿತು. ಬೀಸುವ ಗಾಳಿ ನಾಪತ್ತೆ ಆಗಿಹೋಯಿತು. ಆಗ ಆ ಆಚಾರ್ರ ಪುಟ್ಟಮ್ಮಜ್ಜಿಗೆ ಕರುಳು ಚುರುಕ್ ಅಂದು 'ಅಯ್ಯೋ ಇದೇನೆ ಇಂಗೊಡಿತಿಯ. ಇದೇನು ದನ ಕೆಟ್ಟೋಯ್ತು ನಿನ್ನ ವಡ್ತ ತಡ್ಕೊಳೋಕೆ, ಅಂತಾ ತಪ್ಪೇನಾಗೋಯ್ತು ಈಗ' ಅಂತ ಬೈದು ದ್ಯಾವಕ್ಕನ ಕೈಲಿದ್ದ ಕೋಲನ್ನ ಕಿತ್ತು ಅತ್ತ ಎಸೆದಳು.

ತ್ಯಾಗನ ಮೈಮೇಲೆ ಕಾಮನಬಿಲ್ಲಂತೆ ಬಾಸುಂಡೆಯ ಬರೆಗಳು ಮೂಡಿದ್ದವು. ಅಳುತ್ತಿದ್ದ ತ್ಯಾಗನ ಸಂತೈಸುತ್ತ ಸೆರಗಿನ ಮರೆಗೆ ಎಳೆದುಕೊಂಡ ಪುಟ್ಟಮ್ಮಜ್ಜಿ ಅವನ ಕಣ್ಣೀರೊರೆಸಿ ಎದುರಿಗೇ ಇದ್ದ ಮಕ್ಕಳ ಕುಲುಮೆಗೆ ಕರೆದುಕೊಂಡು ಹೋದಳು. ಮೈ ಕೈ ದೂಳು ಕೊಡವಿ ತಲೆ ಸವರಿ 'ಅಯ್ಯೋ ನನ್ನ ಕಂದ ಅಳಬೇಡ' ಎಂದು ಸಂತೈಸುತ್ತಾ ತಾನೂ ಕಣ್ಣೀರು ತಂದುಕೊಂಡಳು. ಹೊಡೆದ ಏಟನ್ನು ನೆನೆದು ಬೆಚ್ಚಿಬಿದ್ದ ತ್ಯಾಗನು ಬಿಕ್ಕಳಿಸುತ್ತಾ ಅಜ್ಜಿಯನ್ನು ತಬ್ಬಿ ಸೆರಗಿನ ಮರೆಗೆ ಮುಖ ಮಾಡಿದ. ಕುಲುಮೆಯೊಳಗೆ ಆಗಲೇ ಕೆಲಸ ಶುರುವಾಗಿ ಕಾದ ಕಬ್ಬಿಣಕ್ಕೆ ಬೀಳುತ್ತಿದ್ದ ಏಟುಗಳ ಸದ್ದು ಅಲ್ಲಿದ್ದವರ ಗಮನ ಸೆಳೆಯುತ್ತಿದ್ದವು. ಏಳುತ್ತಾ, ಬೀಳುತ್ತಾ ಇದ್ದ ಕಿಡಿಗಳು, ಗುಡುಗಾದ ಮೇಲಿನ ಮಿಂಚಿನಂತೆ ಕಾಣುತ್ತಿದ್ದುದರಿಂದ ಅದೊಂದು ಹೊಸ ಪ್ರಪಂಚದಂತೆ ಭಾಸವಾಗಿ ತ್ಯಾಗ ಅದರೊಳಗೆ ಇಳಿಯುತ್ತಾ, ಇಳಿಯುತ್ತಾ ಹಾಗೆಯೇ ನಿದ್ರೆಗೆ ಜಾರಿದನು. ಆ ಗಾಢ ನಿದ್ರೆಯ ಕನಸ ಕತ್ತಲೊಳಗೆ ಕಣ್ಣಾಮುಚ್ಚಾಲೆ ಆಟ ಆಡುತ್ತಾ ಬಂದ ಈ ಚಿಕ್ಕನಿಗೆ ಆಚಾರರ ಮನೆಯ ಕಿಟಕಿಯಿಂದ ಅದೇನೋ ಪಿಸ ಪಿಸ ದನಿ ಕೇಳಿಸಿತು. ಅದೇನಿರಬಹುದೆಂದು ಬಾಲಕುತೂಹಲ ಬೀರಿ

